ತಬ್ಬಿಕೊಂಡದ್ದನ್ನು ನಾವೆಲ್ಲ ನೋಡಿದೆವು.

ಹಿಂದಕ್ಕೋ ಮುಂದಕ್ಕೋ ನುಗ್ಗಲಾರದೆ ಅಡ್ಡಡ್ಡ ನಡೆದು, ಫುಟ್‌ಪಾತುಗಳನ್ನು ದಾಟಿ, ಎರಡೂ ಬದಿಗಳಲ್ಲಿದ್ದ ಮನೆಗಳ ಗೇಟುಗಳನ್ನು ಹಾರಿ, ಒಳಗಿನ ಹಸಿರು ಲಾನುಗಳನ್ನು ತುಳಿದು, ಮರಗಳನ್ನು ಹತ್ತಿ, ಗಾರ್ಡನ್ನುಗಳನ್ನು ಮುಕುರಿ ನಮ್ಮದೇ ಲೋಕದಲ್ಲಿರುವಾಗ ನಮ್ಮ ಬಡಾವಣೆಯ ಒಬ್ಬರು ಹಾಸಿಗೆ ಹಿಡಿದಿದ್ದ ತಮ್ಮ ತಾಯಿಗೆ ತುರ್ತಾಗಿ ಕೆಲವು ಮಾತ್ರೆಗಳನ್ನು ತರಲು ರಸ್ತೆಯ ಬದಿಯಲ್ಲೇ ಕಾರು ನಿಲ್ಲಿಸಿ ಮೆಡಿಕಲ್ ಶಾಪಿಗೆ ಹೋಗಿದ್ದರು. ಅಲ್ಲಿಂದ ಬರುವ ಬರುವ ಹೊತ್ತಿಗೆ ಅವರ ಕಾರನ್ನೇ ಸುತ್ತುವರಿದಿದ್ದ ಮೆರವಣಿಗೆಯೊಳಕ್ಕೆ ಅವರು ನುಸುಳುವುದು ಹಾಗಿರಲಿ, ಗಾಜುಗಳೊಡೆದು ಜಖಂ ಆಗಿದ್ದ ಅವರ ಕಾರೇ ಬದಿಯ ಚರಂಡಿಯೊಳಕ್ಕೆ ವಾಲಿಕೊಂಡಿತ್ತು. ಎಲ್ಲೆಲ್ಲೂ ನಿಂತುಬಿಟ್ಟಿದ್ದ ವಾಹನಗಳ ಹೊಗೆಯಲ್ಲಿ, ತಲೆಯ ಮೇಲೆ ಕವಿದ ದೂಳಿನಲ್ಲಿ, ತಳ್ಳುವ ಕೈಗಳ ನಡುವೆ, ಕೂಗಾಟದ ಬೆದರಿಕೆಯ ಬೈಗುಳಗಳ ನಡುವೆ ನಾವೆಲ್ಲ ಎಷ್ಟೋ ವರ್ಷಗಳಿಂದ ಚಪ್ಪಲಿ ರಿಪೇರಿ ಮಾಡಿಸುತ್ತಿದ್ದ ಪೂಜಪ್ಪನನ್ನು ಕಂಡು ನಮಗೆ ಆಶ್ಚರ್ಯವಾಯಿತು. ಯಾರೋ ತಂದಿರಿಸಿದ ಏಣಿ ಹತ್ತಿ, ಹಾರ ಹಾಕಿ ಕೈಗೆರಡು ನಿಂಬೆಹಣ್ಣು ಕೊಟ್ಟ ಅವನನ್ನೂ ಭದ್ರಪ್ಪನವರು ತಬ್ಬಿಕೊಂಡರು. ಅವನು ಅವರ ಚಪ್ಪಲಿಗೆ ಪಾಲಿಶ್ ಮಾಡಿಬಿಡಬೇಕೆಂದು ಬಗ್ಗಿದರೆ ಅವರ ಚಪ್ಪಲಿ ಅವರ ದಿರಿಸಿನಷ್ಟೇ ಬೆಳ್ಳಗೆ ಫಳಫಳವೆನ್ನುತ್ತಿತ್ತು!

ಮೆರವಣಿಗೆಯಲ್ಲಿ ಎದುರಿಗಿದ್ದ ತಲೆಗಳನ್ನು ಬಿಟ್ಟರೆ ಒಂದು ಗಾವುದ ದೂರ ಕೂಡ ಕಾಣುತ್ತಿರಲಿಲ್ಲ. ನಾವು ಆಗಲೇ ತಪತಪವೆಂದು ಕೆಳಗೆ ಬೀಳುತ್ತಿರುವ ಅಥವಾ ನೆಟ್ಟಗೆ ನಿಲ್ಲಲಾಗದ ಜನರ ಸಮುದ್ರವನ್ನು ದಾಟಿ, ತತ್ತರಿಸುತ್ತ, ಬಿದ್ದುಬಿಡದಂತೆ ಒಬ್ಬರಿಗೊಬ್ಬರು ಆತುಕೊಂಡು ಕಡೆಗೂ ಒಂದಷ್ಟು ಉಸಿರಾಡಬೇಕೆಂದು ಹುಡುಕಾಡಿದರೆ ಜಾಗವೆಲ್ಲಿ, ಜಾಗವೇ ಇಲ್ಲ. ನೆಲದಲ್ಲಿ ದೂಳು ಕುಡಿದ, ಕಸಕಡ್ಡಿ ಮೆಟ್ಟಿದ ಬರಿಗಾಲುಗಳು, ಚಪ್ಪಲಿ ಬೂಟುಗಳ ಕಾಲುಗಳು, ಬೇರೆಯವರ ಕಾಲುಗಳನ್ನು ತುಳಿಯುತ್ತಿರುವ ಕಾಲುಗಳು, ಕೆಲವರ ಇಡೀ ಮೈಯಿಗೆ ಆಸರೆ ಕೊಟ್ಟು ನಿಲ್ಲಿಸಿರುವ ಕಾಲುಗಳು; ಕಾಲುಗಳ ಆ ದಟ್ಟ ಕಾಡಿನಲ್ಲಿ




ನಡೆಯುವುದಿರಲಿ, ತೆವಳುವುದಕ್ಕೂ ಜಾಗವಿರದಾಗ ನಮ್ಮ ಎದುರಿಗಿದ್ದ ಒಬ್ಬ ಹುಡುಗ ತನ್ನೆದುರಿಗೆ ಹೇಗೋ ದಾರಿ ಮಾಡಿಕೊಂಡು ಓಡುತ್ತಿದ್ದ ಹುಡುಗಿ ತನ್ನ ಕಣ್ಣಿಂದ ತಪ್ಪಿಸಿಕೊಳ್ಳಬಾರದೆಂದು ತಾನೂ ನುಗ್ಗುತ್ತಿದ್ದುದನ್ನು ಕಂಡದ್ದೇ ಗುಂಪಿನೊಳಗಿಂದ ‘ನಿಂಗೇನು ಹುಚ್ಚಾ?’ ಎಂದು ಯಾರೋ ಕೂಗಿಕೊಂಡದ್ದು ಕೇಳಿಸಿದ ತಕ್ಷಣ ಆ ಹುಡುಗನ ಮುಂದಿಂದ ಹಿಂದಕ್ಕೆ ಬಂದು ಅವನ ಕಾಲು ತುಳಿದ ಠೊಣಪನೊಬ್ಬ ತನ್ನ ತೋಳುಗಳ ಸ್ನಾಯುಗಳನ್ನು, ಮೇಲುಬ್ಬಿದ ನರಗಳನ್ನು ತೋರಿಸುತ್ತಾ, ‘ಬರ್ತೀಯೇನೋ ದಮ್ಮಿದ್ದರೆ, ಬಾ ಒಂದು ಕೈ ನೋಡೇಬಿಡೋಣ’ ಎಂದು ಅಬ್ಬರಿಸಿದ ಆ ಕ್ಷಣದಲ್ಲಿ ಜನಸಮೂಹಕ್ಕೆ ಅದೆಷ್ಟು ಬಲಬಂದಿತ್ತೆಂದರೆ ಅದು ಹೂಂಕರಿಸುವ ಗೂಳಿಯಂತೆ ಒಮ್ಮೆ ಮುಂದೊತ್ತಿದ್ದೇ ನಮಗೆ ನಾವೇ ಏನೋ ಅವಸರದಲ್ಲಿದ್ದವರಂತೆ ನಮ್ಮ ಸುತ್ತಮುತ್ತ ಇದ್ದವರನ್ನು ತಳ್ಳುತ್ತಾ ಅಥವಾ ಸುತ್ತಮುತ್ತ ಇದ್ದವರೇ ನಮ್ಮನ್ನು ತಳ್ಳುತ್ತಾ ಯಾವಾಗ ಈ ಕಿಷ್ಕಿಂಧೆಯಿಂದ ಪಾರಾದೇವು ಎಂದು ಹಂಬಲಿಸುತ್ತಿರುವಾಗಲೇ ನಾವು ಭಕ್ತಾದಿಗಳು ನೆರೆದಿದ್ದ ವೀರಾಂಜನೇಯಸ್ವಾಮಿ ದೇವಸ್ಥಾನದ ಹೆಬ್ಬಾಗಿಲನ್ನು ತಲುಪಿಬಿಟ್ಟಿದ್ದೆವು. ನಮ್ಮೆಲ್ಲರ ಜೈಕಾರಗಳ ಮಧ್ಯೆ ಹಲವು ಮುಖಂಡರ ನೆರವಿನಿಂದ